‘ಹುಯ್ಯೋ ಹುಯ್ಯೋ ಮಳೆರಾಯ ಹೂವಿನ ತೋಟಕೆ ನೀರಿಲ್ಲ’, ‘ಬಾರಪ್ಪೋ ಮಳೆರಾಯ ನೀನ್ ಬರದಿದ್ರೆ ಬಾಳಿಲ್ಲ’ ಎಂದು ಮಳೆರಾಯನನ್ನು ಕರೆಯುತ್ತಿದ್ದ ಜನಪದ ಪರಂಪರೆ ನಮ್ಮದು. ಮಳೆಯನ್ನು ದೇವೇಂದ್ರನಿಗೂ, ಮಿಂಚನ್ನು ಅವನ ಬಾರುಕೋಲಿನ ಬೀಸಿಗೂ, ಗುಡುಗು ಸಿಡಿಲುಗಳನ್ನು ಅವನ ಕುದುರೆಗಳ ಪಾದದ ಖುರಪುಟ ಸದ್ದಿಗೂ ಹೋಲಿಸಿ ಕಥನಗಳನ್ನು ಕಟ್ಟಿ ಗೌರವದಿಂದ ಕಂಡವರು ನಾವು. ಆದರೆ ಇಂದು ಅದೇ ಮಳೆಯನ್ನು ರಣಭೀಕರ, ರಕ್ಕಸ, ಕುಂಭದ್ರೋಣ ಎಂದೆಲ್ಲಾ ಜರಿಯುವ ಮಟ್ಟಕ್ಕೆ ಬಂದಿದ್ದೇವೆ. ಮಳೆ ಬಂದರೆ ಇಳೆಗೆ ತಂಪು, ಎಲ್ಲೆಲ್ಲೂ ಹಸಿರು, ಬದುಕು ಹಸನು ಎಂಬ ಮನೋಭಾವ ಹೋಗಿ ಮಳೆಯಿಂದ ಕೊಚ್ಚಿ ಹೋದ ಬದುಕು, ಜನಜೀವನ ಅಸ್ತವ್ಯಸ್ತ, ಕೃಷಿ ಮೂರಾಬಟ್ಟೆ ಎಂಬ ಪದಪುಂಜಗಳೇ ವಿಜೃಂಭಿಸುತ್ತಿವೆ. ಇಲ್ಲಿ ಖಳನಾಯಕರು ಯಾರು - ನಾವೋ? ಮಳೆಯೋ?

■ ಮಲ್ಲಿಕಾರ್ಜುನ ಹೊಸಪಾಳ್ಯ

